**ದಿನಾಂಕಃ 15-6-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರು | ಗಂಗಾಧರೆಗೌಡ |
| ತಂದೆ ಹೆಸರು | ಚಿಕ್ಕನರಸಯ್ಯ |
| ವಯಸ್ಸು | 50 ವರ್ಷ |
| ವೃತ್ತಿ | ವ್ಯವಸಾಯ |
| ವಾಸ ಸ್ಥಳ | ಬೋಡರಹಳ್ಳಿ |

**ಮುಖ್ಯ ವಿಚಾರಣೆ ಃ** ಶ್ರೀ ಪಿ ವಿ ವೈ ವಕೀಲರಿಂದ ವಾದಿ ಪರವಾಗಿ .

ಪ್ರಸ್ತುತ ದಾವೆಯ ವಾದಿ ಚಿಕ್ಕನರಸಯ್ಯ ನನ್ನ ತಂದೆಯಾಗಿರುತ್ತಾರೆ . ಈ ದಾವೆಯಲ್ಲಿ ಸದರಿಯವರ ಪರ ಸಾಕ್ಷಿ ನುಡಿಯಲು ನನ್ನ ಪರವಾಗಿ ಮೊಕ್ತಿಯಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ . ಸದರಿ ಮೊಕ್ತಿಯಾರು ಪತ್ರವನ್ನು ನಾನು ಈಗ ನೋಡುತ್ತಿದ್ದೇನೆ . ಸಾಕ್ಷಿ ನೋಡಿ ಗುರುತಿಸಿದ ಸದರಿ ಮೊಕ್ತಿಯಾರು ಪತ್ರವನ್ನು ನಿಪಿ–1 ಎಂದು ಗುರುತಿಸಲಾಯಿತು .

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು , ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ . ಅವುಗಳನೆಲ್ಲಾ ಓದಿಸಿ , ಕೇಳಿಸಿಕೊಂಡು ಸಹಿ ಮಾಡಿರುತ್ತೇನೆ .

ನನ್ನ ದಾವೆಗೆ ಪೂರಕವಾಗಿ ದಾಖಲೆಗಳನ್ನು ಹಾಜರು ಪಡಿಸುತ್ತಿದ್ದು ದಿಃ 4–11–1952 ರ ನೊಂದಾಯಿತ ಕ್ರಯಪತ್ರದ ಧೃಡೀಕೃತ ನಕಲನ್ನು ನಿಪಿ –2 ಎಂದು , ದಿಃ 6–11–1954 ರ ನೊಂದಾಯಿತ ಕ್ರಯಪತ್ರದ ಧೃಡೀಕೃತ ನಕಲನ್ನು ನಿಪಿ –3 ಎಂದು , ದಿಃ 22–6–1955 ರ ನೊಂದಾಯಿತ ಕ್ರಯಪತ್ರದ ಧೃಡೀಕೃತ ನಕಲನ್ನು ನಿಪಿ–4 ಎಂದು , 1965–66 ರಿಂದ 1969–70 ವರೆಗಿನ ಸ ನಂ.125/4 ಸ್ವತ್ತಿನ ಪಹಣಿ ಪತ್ರಿಕೆಯನ್ನು ನಿಪಿ–5 ಎಂದು , 2013–14 ಸಾಲಿನ ಸ ನಂ.125/4 ಸ್ವತ್ತಿನ ಪಹಣಿ ಪತ್ರಿಕೆಯನ್ನು ನಿಪಿ–6 ಎಂದು ಗುರುತಿಸಲಾಯಿತು .

2016-17 ಸಾಲಿನ ಸ ನಂ.125/4 ಸ್ವತ್ತಿನ ಪಹಣಿ ಪತ್ರಿಕೆಯನ್ನು ನಿಪಿ-7 ಎಂದು, 2016-17 ಸಾಲಿನ ಸ ನಂ.138/2 ಸ್ವತ್ತಿನ ಪಹಣಿ ಪತ್ರಿಕೆಯನ್ನು ನಿಪಿ-8 ಎಂದು , ಸ ನಂ 125/4 ಸ್ವತ್ತಿಗೆ ಸಂಬಂಧಿಸಿ ಪಾವಗಡ ತಹಶೀಲ್ದಾರ್ ರವರು ದಿಃ 15-11-2016 ರಂದು ನೀಡಿದ ಆರ್ ಆರ್ ದಾಖಲೆಯ ಧೃಡೀಕೃತ ನಕಲನ್ನು ನಿಪಿ-9 ಎಂದು , ಸ ನಂ 125 ಸ್ವತ್ತಿಗೆ ಸಂಬಂಧಿಸಿ ಪಾವಗಡ ತಹಶೀಲ್ದಾರ್ ರವರು ದಿಃ 15-11-2016 ರಂದು ನೀಡಿದ ನಮೂನೆ-1 ದಾಖಲೆಯ ಧೃಡೀಕೃತ ನಕಲನ್ನು ನಿಪಿ-10 ಎಂದು ,ದಿಃ 26-12-2016 ರಂದು ಪಾವಗಡ ತಹಶೀಲ್ದಾರ್ ರವರು ಸ ನಂ 125/4 ಸ್ವತ್ತಿನ ಸೆಟಲ್ ಮೆಂಟ್ ರಿಜಿಸ್ಟರಿನ ಧೃಡೀಕೃತ ನಕಲನ್ನು ನಿಪಿ-11 ಎಂದು , ಮೂಲ ದಾವೆ ನಂ.90/2017 ರಲ್ಲಿನ ಆದೇಶ ಪ್ರತಿಯ ಧೃಡೀಕೃತ ನಕಲನ್ನು , ವಾದ ಪತ್ರದ ಧೃಡೀಕೃತ ನಕಲನ್ನು, ಮಧ್ಯಂತರ ಅರ್ಜಿಯ ಧೃಡೀಕೃತ ನಕಲನ್ನು ಅನುಕ್ರಮವಾಗಿ ನಿಪಿ-12 ರಿಂದ 14 ಎಂದು , ದಿಃ 17-4-2017 ರಂದು ಮಧುಗಿರಿಯ ಉಪವಿಭಾಗಾಧಿಕಾರಿಗಳು ಹೊರಡಿಸಿದ ಆದೇಶದ ಧೃಡೀಕೃತ ನಕಲನ್ನು ನಿಪಿ-15 ಎಂದು , ದಿಃ 19-2-1992 ರ ಕಂದಾಯ ಪಾವತಿ ರಶೀದಿಯನ್ನು ನಿಪಿ-16 ಎಂದು , ವಂಶವೃಕ್ಷದ ಪ್ರಮಾಣ ಪತ್ರವನ್ನು ನಿಪಿ-17 ಎಂದು , ದಿಃ1-4-1940 ರಿಂದ 31-3-2004 ರವರೆಗಿನ ಸ ನಂ.125/4 ಸ್ವತ್ತಿಗೆ ಸಂಬಂಧಿಸಿದ ಋಣಭಾರ ಪತ್ರವನ್ನು ನಿಪಿ-18 ಎಂದು , ಸದರಿ ಸ್ವತ್ತಿಗೆ ಸಂಬಂಧಿಸಿದ ದಿಃ 1-4-2004 ರಿಂದ 25-11-2016 ವರೆಗಿನ ಋಣಭಾರಪತ್ರವನ್ನು ನಿಪಿ-19 ಎಂದು , ದಿಃ 20-7-2018 ರಂದು ತುಮಕೂರು ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶದ ಧೃಡೀಕೃತ ನಕಲನ್ನು ನಿಪಿ-20 ಎಂದು ಗುರುತಿಸಲಾಯಿತು .

(ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು )

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ**
**ಪಾವಗಡ.**